“ನಿನ್ನ ಕೊರಗು ಮುಖದಲ್ಲೇ ಕಾಣ್ತಿದೆ ತಾಯೀ. ಮನೆ ಬೆಳಗೋಕೆ ಒಂದು ಕುಡಿ ಇಲ್ಲ ಅಂತ ಕೊರಗು ಹಚ್ಕೊಂಡಿದ್ದಿ. ತೆಂಗಿನಕಾಯಿಗೆ ಮೂರು ಕಣ್ಣು ಇದ್ದಂಗೆ ಈ ಮನೇಲಿ ಮೂರು ಮಕ್ಕಳು ಆಡೋ ಯೋಗ ಉಂಟು...” ಗಂಡಸು ಹೇಳಿದ. ‘ಇವರ್ಯಾರೋ ಸಾಮಾನ್ಯ ಭಿಕ್ಷುಕರಲ್ಲ’ ಎಂದು ಅನಿಸಿಯೇ ಅನಿಸಿತು ಯಶೋದಮ್ಮನಿಗೆ. ತಮ್ಮ ಪೂಜೆಪುನಸ್ಕಾರ ಫಲ ಕೊಟ್ಟು ಸಾಕ್ಷಾತ್ ಶಿವಪಾರ್ವತಿಯರೇ ಮನೆ ಬಾಗಿಲಿಗೆ ವರ ಕೊಡಲು ಬಂದಿದ್ದಾರೇನೋ ಎಂದಿತು ಭಾವುಕ ಮನಸ್ಸು. ಯಾವತ್ತಿನಿಂದಲೋ ಎದೆಯಲ್ಲಿ ಬಚ್ಚಿಟ್ಟುಕೊಂಡ ಸಂಕಟ ಕರಗಿ ಕಣ್ಣಲ್ಲಿ ನೀರಿಳಿಯಿತು.

“ಅಳೋ ಕಾಲ ಮುಗೀತು ತಾಯೀ. ಮೊಮ್ಮಕ್ಕಳನ್ನ ಮಡಿಲಲ್ಲಿ ಕೂರಿಸಿಕೊಂಡು ನಗೋ ಕಾಲ ಹತ್ರ ಬಂತು. ಎರಡು ಊದುಬತ್ತಿ ಹಚ್ಚಿ, ಕರ್ಪೂರ ಬೆಳಗಿ, ಅಮ್ಮನಿಗೆ ಆರತಿ ಮಾಡು. ಭಕ್ತಿಯಿಂದ ಕೈ ಮುಗಿ. ಪ್ರಸಾದ ಹಣೆಗೆ ಹಚ್ಕೋ. ಅಮ್ಮ ಕೇಳೋದೆಲ್ಲಾ ಭಕ್ತಿ, ಪ್ರೀತಿ. ಅವಳಿಗೆ ಮತ್ತೇನೂ ಬೇಡ...”




ಮಟಮಟ ಮಧ್ಯಾಹ್ನದ ಹೊತ್ತು ಮನೆ ಬಾಗಿಲಿಗೆ ಬಂದು ಇಷ್ಟೆಲ್ಲಾ ಕರಾರುವಾಕ್ಕಾಗಿ ಹೇಳುವ ಇವರನ್ನು ಕಂಡು ಭಕ್ತಿಭಾವದಿಂದ ತುಂಬಿ ಹೋಗಿ ನಿಂತಲ್ಲೇ ತಲೆ ಬಾಗಿಸಿದರು ಯಶೋದಮ್ಮ.

“ಹೂಂ, ಕಾಲಿಗೆ ನೀರು ಕೊಟ್ಟು ಅಮ್ಮನ್ನ ಒಳಗೆ ಕರಿ. ಭಕ್ತಿಯಿಂದ ಪೂಜೆ ಮಾಡು. ಏನು ವರ ಕೇಳ್ತೀಯೋ ಕೇಳ್ಕೋ...” ಹೆಂಗಸಿನ ಅಧಿಕಾರವಾಣಿ. ದೇವರನ್ನು ಉಣುಗೋಲಿನಾಚೆ ನಿಲ್ಲಿಸಿ ಪೂಜೆ ಮಾಡುವುದು ತರವೇ? ಅದೂ ವರ್ಷಾನುಗಟ್ಟಲೆಯ ತನ್ನ ಹೆಬ್ಬಯಕೆಗೆ ಆಶೀರ್ವದಿಸಲು ಬಂದಿರುವ ದೇವರನ್ನು?